

ನಮಗೆ ನಿಜವಾದ ಹೆಮ್ಮೆ, ಅಭಿಮಾನ ಇರಬೇಕಾಗಿದ್ದು ರಸ್ತೆ, ಸೇತುವೆ, ಕಾಂಕ್ರೀಟ್ ಕಟ್ಟಡಗಳ ಮೇಲಲ್ಲ. ಇವನ್ನು ಯಾರು ಎಲ್ಲಿ ಬೇಕಾದರೂ ನಿರ್ಮಿಸಬಹುದು. ಆದರೆ ನಮ್ಮ ನಿಜವಾದ ಹೆಮ್ಮೆಯ ಸಂಪತ್ತು ನಮ್ಮ ಕಾಡುಗಳು.  ಸಾವಿರಾರು ವರ್ಷಗಳಿಂದ ನಮ್ಮನ್ನು, ನಮ್ಮ ನಾಗರಿಕತೆಯನ್ನು ಕಾಪಾಡಿಕೊಂಡು ಬಂದಿರುವುದು ನಮ್ಮ ಕಾಡುಗಳು.  ಇಂದು ಜಗತ್ತಿನಾದ್ಯಂತ ಸಂಶೋಧಕರು, ಪ್ರವಾಸಿಗರು, ಸಾಹಸಿಗಳು ನಮ್ಮೂರಿಗೆ ಬರುತ್ತಿದ್ದಾರೆ ಎಂದರೆ ಅದಕ್ಕೆ ಕಾರಣ ನಮ್ಮೂರಿನ ರಸ್ತೆಗಳು, ಸೇತುವೆಗಳು, ಹೋಟೆಲುಗಳು ಮತ್ತು ರೆಸಾರ್ಟುಗಳಲ್ಲ. ವಾಸ್ತವ ಕಾರಣ ನಮ್ಮ ಕಾಡುಗಳು, ಅಲ್ಲಿಯ ಪ್ರಶಾಂತ ವಾತಾವರಣ, ಇಲ್ಲಿನ ಸ್ವಚ್ಛ ಗಾಳಿ, ಶುಭ್ರ ನೀರು, ನಿಗೂಢತೆ, ಜೀವವೈವಿಧ್ಯ, ಆಪ್ತ ವಾತಾವರಣ ಮತ್ತು ಹಚ್ಚಹಸಿರು ಎಲ್ಲವೂ ಕಾರಣ.

ಲಭ್ಯ ಜಲಸಂಪನ್ಮೂಲಗಳನ್ನು ನಾವು ವಿವೇಚನಾರಹಿತರಾಗಿ ಬಳಸುತ್ತಿರುವುದರಿಂದ ಮುಂದಿನ ದಿನಗಳು ಮನುಷ್ಯನಿಗೆ ಮಾತ್ರವಲ್ಲ, ಜಾನುವಾರು ಮತ್ತು ವನ್ಯಜೀವಿಗಳಿಗೂ ಮಾರಕವಾಗಲಿದೆ. ಮನುಷ್ಯರು, ಪ್ರಾಣಿಗಳು, ಕೀಟಗಳು ಹಾಗೂ ಚಲನೆಯಿರುವ ಎಷ್ಟೋ ಜೀವಿಗಳು ಮತ್ತು ಹಸಿರು ಸಸ್ಯವರ್ಗ ಎಲ್ಲವೂ ತಮ್ಮ ತಮ್ಮ ಬದುಕಿಗೆ ಪರಸ್ಪರ ಅವಲಂಬಿಸಿವೆ. ನಮ್ಮ ಈ ಪ್ರದೇಶದ ಬಹುದೊಡ್ಡ ಜೀವವೈವಿಧ್ಯಮಯ ಸಂಪತ್ತು ಪಶ್ಚಿಮ ಘಟ್ಟದ ಕಾಡುಗಳು. ಹತ್ತಾರು ನದಿಗಳಿಗೆ ಉಗಮ ಸ್ಥಾನವಾದ ಪಶ್ಚಿಮಘಟ್ಟಗಳು ಪ್ರಪಂಚದ ಜೀವವೈವಿಧ್ಯದ 'ಹಾಟ್‌ಸ್ಪಾಟ್!' ಇಲ್ಲಿರುವ ಇರುವೆ, ಗೆದ್ದಲು, ಹುಲ್ಲು, ಪೊಟರೆಯೊಳಗಿನ ಹಕ್ಕಿ, ಧರೆಗುರುಳಿದ ಮರ, ಕಲ್ಲು ಇವೆಲ್ಲವಕ್ಕೂ ಅವುಗಳದೇ ಆದ ಜೈವಿಕ ಮಹತ್ವ ಇದೆ.  ಈ ಕಾಡಿನೊಳಗೆ ನಿಜಕ್ಕೂ ಏನು ನಡೆಯುತ್ತಿದೆ?

ಪಶ್ಚಿಮ ಘಟ್ಟದ ಕಾಡುಗಳ ಮೇಲೆ ಎರಡು ರೀತಿಯ ದಾಳಿಗಳು ನಡೆಯುತ್ತಿವೆ. ವ್ಯಾಪಾರ ಮತ್ತು ಅಭಿವೃದ್ಧಿಯ ಭ್ರಮೆಯಲ್ಲಿ ನಡೆಸುತ್ತಿರುವ ದಾಳಿ ಒಂದೆಡೆ. ನಮ್ಮ ಅರಿವಿಗೇ ಬಾರದಂತೆ ಸಹಸ್ರಾರು ಜೀವಪ್ರಭೇದಗಳು ಕಣ್ಮರೆಯಾಗುತ್ತಿರುವುದು ಇನ್ನೊಂದೆಡೆ.

'ಭೂಮಿಯ ಮೇಲಿನ ಜನಸಂಖ್ಯೆಗಿಂತ ಹೆಚ್ಚು ಸಂಖ್ಯೆಯ ಸೂಕ್ಷ್ಮಜೀವಿಗಳು ಒಂದು ಚಮಚ ಮಣ್ಣಿನಲ್ಲಿರುತ್ತವೆ' ಎಂಬುದು ಈ ಜೀವಜಗತ್ತಿನ ಅನನ್ಯತೆ, ಅಗಾಧತೆ ಮತ್ತು ಮೌಲ್ಯವನ್ನು ಹೇಳುತ್ತದೆ. ನಮ್ಮ ಪಶ್ಚಿಮಘಟ್ಟ 140 ಬಗೆಯ ಸಸ್ತನಿಗಳ, 510 ಪ್ರಭೇದದ ಪಕ್ಷಿಗಳ, 260 ರೀತಿಯ ಸರೀಸೃಪಗಳ, 18 ವಿಶಿಷ್ಠ ಉಭಯವಾಸಿಗಳ ಹಾಗೂ ಭಾರತದ ಶೇಕಡಾ 25ರಷ್ಟು ಜೀವವೈವಿಧ್ಯದ ಆವಾಸಸ್ಥಾನವಾಗಿದೆ. ಇದಕ್ಕಿಂತ ಭಾಗ್ಯ ಬೇರೇನಿದೆ? 'ಈ ಕಾಡಿನ ಒಡೆಯರು ನಾವು' ಎಂಬ ಹೆಮ್ಮೆಯನ್ನು ನಾವೇಕೆ ಕಳೆದುಕೊಳ್ಳಬೇಕು?

ಮರದ ಮೇಲಿರುವ ಆರ್ಕಿಡ್‌ಗಳು, ತೊಗಟೆಯಡಿ ವಾಸಿಸುವ ಹುಳುಹುಪ್ಪಟೆಗಳು, ಕಪ್ಪೆಗಳು, ಪೊಟರೆಯ ಪಕ್ಷಿಗಳು, ನೆಲದಡಿಯಿಂದ ಉದ್ಭವವಾಗುವ ಅಣಬೆಗಳು, ಯಾವುದೋ ಕೊರಕಲಿನಿಂದ ಜಿನುಗಿ ಬೃಹತ್ ನದಿಗೆ ಜೀವ ನೀಡುವ ಸರುಕಲುಗಳು, ಲಕ್ಷಾಂತರ ಜೀವಿಗಳಿಗೆ ಆವಾಸಸ್ಥಾನವಾಗಿರುವ ಜವುಗು ಪ್ರದೇಶಗಳು, ತನ್ನದೇ ಆದ ಜೀವವೈವಿಧ್ಯ ಪಡೆದಿರುವ ಬಂಜರು ಪ್ರದೇಶ, ಮರಗಳು ಬೇರಿಳಿಸಿ ಭಾಷ್ಪೀಕರಿಸುವ ನೀರು, ಮೇಲ್ಮಣ್ಣಿನ ಸೂಕ್ಷ್ಮ ಜೀವಿಗಳು, ಕಲ್ಲಿನಡಿಯ ನೀರಿನ ಸಂಗ್ರಹ, ದೊಣೆಗಳೊಳಗಿನ

